ಶ್ರೀ ಬಾಪೂಗೌಡ ರಾಯಪ್ಪ.—ಸುಮಾರು ನಾಲ್ಕು ವರ್ಷಗಳಿಂದ ಕೇವಲ ಒಂದು ವ್ಯಕ್ತಿಯಲ್ಲಿ ರಿಕಾರ್ಡು ಇಟ್ಟುಕೊಂಡು, ಹಣವನ್ನು ಇಟ್ಟುಕೊಂಡರೆ ದುರುಪಯೋಗವಾಗಿಲ್ಲ ಎಂದು ಹೇಳುತ್ತಾ ಇದ್ದೀರಿ. ನಾಲ್ಕು ವರ್ಷದಿಂದ 11 ಸಾವಿರ ರೂಪಾಯಿಗಳನ್ನು ತನ್ನ ಸ್ವಂತಕ್ಕೆ ಉಪಯೋಗ ಮಾಡಿಕೊಂಡಂಥ ವ್ಯಕ್ತಿಯ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎ. ಶಂಕರ್ ಆಳ್ವ.—ಈ ಅಪರಾಧ ಟೆಕ್ನಿಕಲ್ ಎವಿಡೆನ್ಸ್ ಆಗುತ್ತದೆ ಎನ್ನುವ ಮಟ್ಟಕ್ಕೆ ಹೇಳಿದ್ದೇನೆ, ಸೊಸೈಟಿಯ ಹಣವನ್ನು ಪ್ರೆಸಿಡೆಂಟ್ ಆದವರು ಇಟ್ಟುಕೊಂಡರೆ ಅದನ್ನು ದುರುಪಯೋಗಪಡಿಸಿದಂತಾಗುವುದಿಲ್ಲ. ಅದು ಸ್ಟ್ರಿಕ್ಟ್ ಆಗಿ ದುರುಪಯೋಗವಾಗುವುದಿಲ್ಲ. ಸೊಸೈಟಿಯವರು ಕೇಳಿದ ಕೂಡಲೇ ಹಣವನ್ನು ಕೊಡದಿದ್ದರೆ ಅದು ದುರುಪಯೋಗ ಮಾಡಿದಂತಾಗುತ್ತದೆ. ಇದನ್ನೂ ಸಹ ಪರಿಶೀಲಿಸುವುದಕ್ಕೆ ಹೇಳಿದ್ದೇನೆ. ಮತ್ತು ತನಿಖೆ ಮಾಡಲಿಕ್ಕೆ ಪೋಲೀಸರನ್ನು ಕಳುಹಿಸಿಕೊಟ್ಟು ಆದೇಶ ಕೊಟ್ಟಿದ್ದೇನೆ.

ಶ್ರೀ ಬಾಪೂಗೌಡ ರಾಯಪ್ಪ.—ನಾಲ್ಕು ವರ್ಷದಿಂದ ಸತತವಾಗಿ ಒಬ್ಬ ವ್ಯಕ್ತಿ ರಿಸರ್ವ್ ಬ್ಯಾಂಕಿನ 11 ಸಾವಿರ ರೂಪಾಯಿಗಳ ಹಣವನ್ನು ಇಟ್ಟುಕೊಂಡಿದ್ದರೆ ಅದು ದುರುಪಯೋಗವಲ್ಲ ಎಂದು ಹೇಳುತ್ತಾ ಇದ್ದೀರಿ, ತಮ್ಮ ಅಧಿಕಾರಿಗಳು ಹತ್ತು ಪೈಸೆಯನ್ನು ಒಂದು ತಾಸು ಇಟ್ಟುಕೊಂಡರೆ ಅದನ್ನು ಮಿಸ್ ಅಪ್ರೊಪ್ರಿಯೇಷನ್ ಎಂದು ಹೇಳುತ್ತೀರಿ, ಇದು ಮಿಸ್ ಅಪ್ರೋಪ್ರಿಯೇಷನ್ ಕೇಸು ಆಗುವುದಿಲ್ಲವೇ ?

ಶ್ರೀ ಎ. ಶಂಕರ್‌ಆಳ್ವ.—ಟೆಕ್ನಿಕಲಿ ಹಣ ಇಟ್ಟುಕೊಂಡರೆ ಅದು ಆಫೆನ್ಸ್ ಆಗುವುದಿಲ್ಲ. ಅದನ್ನು ಕನ್‌ವರ್ಷನ್ ಮಾಡಿದರೆ ಮಾತ್ರ ಅದು ಆಫೆನ್ಸ್ ಆಗುತ್ತದೆ. ತಮಗೆ ಕ್ರಿಮಿನಲ್ ಕೇಸ್‌ಗಳ ಬಗ್ಗೆ ಗೊತ್ತಿರಬೇಕು. ಹಣವನ್ನು ದುರುಪಯೋಗಪಡಿಸಿದ್ದಾರೆ ಎನ್ನುವುದು ರುಜುವಾತಾಗಬೇಕು. ಹಣವನ್ನು ಜೇಬಿನಲ್ಲಿ ಇಟ್ಟುಕೊಂಡ ತಕ್ಷಣ ದುರುಪಯೋಗವಾಗುತ್ತದೆ ಎನ್ನುವುದು ಅಲ್ಲ. ಅದು ಸ್ಟ್ರಿಕ್ಟ್ ಆಗಿ ಆಫೆನ್ ಆಗುವುದಿಲ್ಲ. ಇದನ್ನೆಲ್ಲಾ ವಿಚಾರ ಮಾಡಬೇಕು ಎಂದು ಆದೇಶ ಕೊಟ್ಟಿದ್ದೇನೆ.

MATTERS RAISED UNDER RULE 312

(i) Re : *News item in a newspaper against behaviour of Minister of State.*

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ರಾಜ್ಯ ಸಚಿವರೊಬ್ಬರ ಮನೆಯಿಂದ ಆಶ್ರಮಕ್ಕೆ ಸೇರಿದ ಯುವತಿಯ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿದೆ. ಆ ಯುವತಿ ಯಾರು ? ಯಾವ ರಾಜ್ಯ ಸಚಿವರ ಮನೆಯಿಂದ ಬಂದಿದ್ದಾರೆ, ಅವಿವಾಹಿತ ಮಹಿಳೆಯನ್ನು ಬಲಾತ್ಕಾರವಾಗಿ ಮನೆಯಿಂದ ಹೊರಗೆ ಕಳುಹಿಸಿ, ಇವಳನ್ನು ಪೋಲೀಸರು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಿ ಬನ್ನೇರುಘಟ್ಟದ ಆಶ್ರಮಕ್ಕೆ ಸೇರಿಸಿದ್ದಾರೆ. ಈಕೆ ಅವಿವಾಹಿತಳೆಂದೂ ಮುಂಬೈ ನಿವಾಸಿಯೆಂದೂ ತಿಳಿದುಬಂದಿದೆ. ಸಚಿವರ ಆದೇಶದಂತೆ ಮುನಿರೆಡ್ಡಿ ಪಾಳ್ಯ ಪೋಲೀಸ್ ಠಾಣೆಯ ಓರ್ವ ಹೆಡ್ ಕಾನ್ಸ್‌ಟೇಬಲ್ ಈ ಯುವತಿಯನ್ನು ಅವರ ಮನೆಯಿಂದ ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ಈ ಆಶ್ರಮಕ್ಕೆ ಸೇರಿಸಿದ್ದನೆಂದೂ ವಿಶ್ವಾಸನೀಯವಾಗಿ ತಿಳಿದುಬಂದಿದೆ.

ಇದರಲ್ಲಿ ಈಗಿನ ರಾಜ್ಯ ಸಚಿವರೊಬ್ಬರ ಮನೆಯಿಂದ ಯುವತಿಯನ್ನು ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ಆಶ್ರಮಕ್ಕೆ ಸೇರಿಸಿದ್ದಾರೆ. ಸಚಿವರು ಶನಿವಾರ ನಗರದ ಹಿರಿಯ ಪೋಲೀಸ್ ಅಧಿಕಾರಿಯೊಬ್ಬರಿಗೆ ಫೋನ್ ಮಾಡಿ ಈ ಯುವತಿಯನ್ನು ತಮ್ಮ ಮನೆಯಿಂದ ಹೊರಗೆ ಹಾಕುವಂತೆ ತಿಳಿಸಿದರೆಂದೂ ಸ್ಥಳಕ್ಕೆ ಭೇಟಿ ನೀಡಿದ್ದ ಅಧಿಕಾರಿಗಳು ಈ ಬಗ್ಗೆ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರೆಂದೂ ಗೊತ್ತಾಗಿದೆ. ಆದಾದ ನಂತರ ಸಚಿವರ ಆಪ್ತ ಸಹಾಯಕರೊಬ್ಬರು ಮುನಿರೆಡ್ಡಿ ಪಾಳ್ಯ ಪೋಲೀಸ್ ಠಾಣೆಗೆ ಟೆಲಿಫೋನ್ ಮಾಡಿ ಈ ಯುವತಿಯನ್ನು ಸಚಿವರ ಮನೆಯಿಂದ ಹೊರಗೆ ಹಾಕಲು ತಿಳಿಸಿದರೆಂದೂ ಹೆಡ್ ಕಾನ್ಸ್‌ಟೇಬಲ್ ಕೂಡಲೇ ಅವರ ಮನೆಗೆ ಧಾವಿಸಿ ಟ್ಯಾಕ್ಸಿಯೊಂದರಲ್ಲಿ ಆಕೆಯನ್ನು ಬನ್ನೇರುಘಟ್ಟ ರಸ್ತೆಯ ಆಶ್ರಮವೊಂದರಲ್ಲಿ ಬಿಟ್ಟು ಬಂದನೆಂದೂ ಅನಂತರ ಈ ಬಗ್ಗೆ ಸಬ್ ಇನ್ಸ್‌ಪೆಕ್ಟರ್ ಅವರಿಗೆ ವರದಿ ಮಾಡಿದನೆಂದೂ ಗೊತ್ತಾಗಿದೆ. ಈ ವಿಷಯ ಗೊತ್ತಾದನಂತರ ಪೋಲೀಸರು ಆಶ್ರಮಕ್ಕೆ ತೆರಳಿ ಯುವತಿಗಾಗಿ ಶೋಧಿಸಿದರೆಂದೂ ಆಕೆಯನ್ನು ಹುಡುಕಲು ಸಾಧ್ಯವಾಗಲಿಲ್ಲವೆಂದು ತಿಳಿದುಬಂದಿದೆ. ಪೋಲೀಸ್ ಕಮಿಷನರ್ ಅವರು ಈ ಬಗ್ಗೆ ವಿವರವಾದ ಒಂದು ವರದಿಯನ್ನು ರಾಜ್ಯ ಪೋಲೀಸ್ ಮುಖ್ಯಾಧಿಕಾರಿಗಳಿಗೆ ಕಳುಹಿಸಿದ್ದರೆಂದೂ ಗೊತ್ತಾಗಿದೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಸಚಿವರ ಮನೆಯಲ್ಲಿ ದೊಡ್ಡ ಗದ್ದಲ ನಡೆದಿದೆ. ನಡೆದ ಮೇಲೆ ಆಕೆಯನ್ನು ಹೊರಗಡೆ ಕಳುಹಿಸಿಕೊಡುವುದಕ್ಕೆ ಆಪ್ತ ಕಾರ್ಯದರ್ಶಿಗಳು ಪೋಲೀಸ್ ಸ್ಟೇಷನ್‌ಗೆ ಫೋನ್ ಮಾಡಿ.....

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಇದು ಎಲ್ಲಾ ನಿಮ್ಮ ಊಹೆ.

ಶ್ರೀ ಪಾಟಾಳ್ ನಾಗರಾಜ್.—ಸಚಿವರ ಮನೆಯಿಂದ ಯುವತಿಯನ್ನು ಬಲಾತ್ಕಾರವಾಗಿ ಕರೆದು ಕೊಂಡುಹೋಗಿ ಆಶ್ರಮಕ್ಕೆ ಸೇರಿಸಿದರೆಂದು ಪರದಿ ಪತ್ರಿಕೆಯಲ್ಲಿ ಬಂದಿದೆ. ಈ ರಾಜ್ಯ ಸಚಿವರು ಯಾರು ? ಬಾಂಬೆಯಿಂದ ಬಂದಿರತಕ್ಕ ಈ ಯುವತಿ ಯಾರು ? ಆಶ್ರಮಕ್ಕೆ ಇವಳನ್ನು ಸೇರಿಸಿದಮೇಲೆ ಇವಳ ಗತಿ ಏನು ? ಸಚಿವರಿಗೆ ಅಪಮಾನವಾಗಬಹುದು ಎಂದು ಅವಳ ಕೊಲೆ ಏನಾದರೂ ನಡೆದಿದೆಯೇ ? ಆಕೆಯನ್ನು ಆಶ್ರಮಕ್ಕೆ ಸೇರಿಸಿದಮೇಲೆ ನಮ್ಮ ರಾಜ್ಯದ ಉನ್ನತ ಅಧಿಕಾರಿಗಳು ಆಶ್ರಮಕ್ಕೆ ಭೇಟಿ ಕೊಟ್ಟಾಗ ಆಕೆ ಆಶ್ರಮದಲ್ಲಿಯೂ ಇಲ್ಲ, ಎಲ್ಲಿಯೂ ಇಲ್ಲ. ಇವಳ ಪರಿಸ್ಥಿತಿ ಏನಾಗಿದೆ ? ಆ ಮಂತ್ರಿಗಳು ಯಾರು ; ಈಕೆಗೂ ಅವರಿಗೂ ಇರತಕ್ಕ ಸಂಬಂಧ ಏನು ? ಈ ಪರಿಸ್ಥಿತಿಯ ಬಗ್ಗೆ ಸರ್ಕಾರ ಸಮಗ್ರವಾದ ತನಿಖೆ ನಡೆಸಿದೆಯೇ ಸಚಿವರು ಯಾರು ಎಂಬುದನ್ನು ಈ ಸಭೆಯ ಮುಂದೆ ಇಡಬೇಕು ಎಂದು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮುಖ್ಯ ಮಂತ್ರಿಗಳು, ಯಾವಾಗಲೂ ಹೇಳುತ್ತಾ ಇರುತ್ತಾರೆ, ಈ ಸಚಿವರುಗಳು ಅಥವಾ ಪಬ್ಲಿಕ್ ವರ್ಕರ್ಸ್ ಏನು ಇದ್ದಾರೆ ಸಾರ್ವಜನಿಕ ಕೆಲಸ ಮಾಡುವವರು, ಇವರ ನೈತಿಕ ಮಟ್ಟ ಉನ್ನತ ಮಟ್ಟದ್ದಾಗಿರಬೇಕು–ಎಂದು ಇದು ನ್ಯಾಯವಾದುದು, ಇದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದರೆ ಗಾಬರಿಯಾಗುವಂಥ ಪರಿಸ್ಥಿತಿ ಬಂದಿದೆ.

Sri D. DEVARAJ URS.—Do you know anything about this ?

ಶ್ರೀ ಎಂ. ಎಸ್ ಕೃಷ್ಣನ್.—ತಾವು ಹೇಳಿ ?

Sri D. DEVARAJ URS.—Don't jump into conclusions.

ಶ್ರೀ ಎಂ. ಎಸ್. ಕೃಷ್ಣನ್.—ನಿಜವೋ ಸುಳ್ಳೋ ನೀವು ಹೇಳಬೇಕು. ಒಂದು ಪಕ್ಷ.....

Sri D. DEVARAJ URS.—Whatever that has appeared in the press .....before we understand, let us not go on making comments on this

ಹೀಗೆ ಆಗಿದ್ದರೆ, ಹಾಗೆ ಹಾಗಿದ್ದರೆ, ಮಲಗಿದ್ದರೆ ?...Let us understand what it is.

ಶ್ರೀ ಎಂ. ಎಸ್. ಕೃಷ್ಣನ್.—ಐ.ಜಿ.ಪಿ.ಗೆ ಪರದಿ ಬಂದಿದೆ. ಇದು ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆ...

ಶ್ರೀ ಡಿ. ದೇವರಾಜ ಅರಸ್.—ಸಚಿವರಿಗೆ ಎಂದರೆ ನಾನು ಏನು ಮಾಡಲಿ ? ನೋಡುವುದಕ್ಕೆ ಅವಕಾಶ ಕೊಡಿ. ಇದು ಸಚಿವರಿಗೆ ಸಂಬಂಧಪಟ್ಟಿದ್ದೋ ಇಲ್ಲವೋ ನಮಗೆ ಗೊತ್ತಿಲ್ಲ ; ನಿಮಗೂ ಕೂಡ ಗೊತ್ತಿಲ್ಲ. ಪತ್ರಿಕೆಯಲ್ಲಿ ಏನೋ ಬಂದಿದೆ. If you allow me look into it, then you can know what Government has to say. ಆಗ ನಾನು ಹೇಳುವುದಕ್ಕೆ ಸಾಧ್ಯ. ನಾನು ಹೇಳುವುದಕ್ಕೆ ಮುಂಚೆ ನೀವೇ ಕಲ್ಪನಾ ಸೌಧ ಕಟ್ಟಿಕೊಂಡು ಅದರ ಮೇಲೆ ಹೀಗೆ ಹಾಗೆ. ಇಂಥವರಿಗೆ ಹೀಗೆ ಆಗಿದೆ ಎಂದು ನೀವು ಮಾತನಾಡಿದರೆ what is all this.?

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮಗೆ ಹೇಳುವುದು ಇಷ್ಟೆ, ನಿಜವೋ ಸುಳ್ಳೋ ತನಿಖೆ ಮಾಡಿಸಿ ವರದಿ ತರಿಸಿ.

ಶ್ರೀ ಡಿ. ದೇವರಾಜ ಅರಸ್.—ಪೇಪರ್‌ನಲ್ಲಿ ಬರುವುದನ್ನು ನಾವು ನೀವು ತಡೆಹಿಡಿಯುವುದಕ್ಕೆ ಆಗುತ್ತದೆಯೇ ? ನಿಜಾಂಶ ಏನು ಎಂದು ವಿಚಾರ ಮಾಡೋಣ.

ಶ್ರೀ ಕೆ. ಎಚ್. ಹನುಮೇಗೌಡ.—ಮಂತ್ರಿಮಂಡಲದ ಸದಸ್ಯರಿಗೆ ಇಂಥಾದ್ದಕ್ಕೆ ಅವಕಾಶ ಕೊಡಬೇಡಿ

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಏನು ಮಾಡೋಣ ? ಗೊತ್ತಾಗುವವರೆಗೆ ಸಾವಧಾನವಾಗಿ ಕೇಳಿ. ಗೊತ್ತಾಗುವುದಕ್ಕೆ ಮುಂಚೆ ಹಾಗೆ ಹೀಗೆ ಮಾಡಿದ್ದಾರೆ ಹೀಗೆ ಮಾಡಿದ್ದಾರೆ ಎಂದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಕೋಪ ಮಾಡಿಕೊಳ್ಳುವ ಪ್ರಶ್ನೆ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್.—ನೀವು ಕಲ್ಪನೆ ಮಾಡಬಾರದು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದನ್ನು ಪೂರ್ತಿ ಕೇಳಲಿಲ್ಲ, ಒಳ್ಳೆಯ ನೈತಿಕ ಮಟ್ಟ ಮಂತ್ರಿಗಳಿಗೂ, ಅಸೆಂಬ್ಲಿ ಮೆಂಬರ್‌ಗಳಿಗೂ ಇರಬೇಕು. ಇವತ್ತು ಆ ನೈತಿಕ ಮಟ್ಟದ ಬಗ್ಗೆ ಅನುಮಾನಾಸ್ಪದವಾಗಿದೆ ಎಂದು ಸುದ್ದಿ ಬಂದಿದೆ. ಯಾರು ಮಂತ್ರಿಗಳೆಂದು ದಯವಿಟ್ಟು ಕಂಡುಹಿಡಿಯಿರಿ. ಹಿಂದೆ ಇಂಗ್ಲೆಂಡಿನಲ್ಲಿ ಪ್ರಫ್ಯೂಮು ಕ್ರಿಶ್ಚಿಯನ್ ಕೀಲರ್ ವಿಷಯ ನಡೆದದ್ದು ತಮಗೆ ಗೊತ್ತಿರಬಹುದು. ಆ ರೀತಿ ಒಂದು ಪಕ್ಷ ಆಗಿದ್ದರೆ ನಿಮ್ಮ ಮಂತ್ರಿಮಂಡಲದಲ್ಲಿ ಅವರಿಗೆ ಸ್ಥಾನವಿಲ್ಲ. ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಅವರು ರಾಜೀನಾಮೆ ಕೊಡಬೇಕು.

ಶ್ರೀ ಡಿ. ದೇವರಾಜ್ ಅರಸ್.—ಪತ್ರಿಕೆಯಲ್ಲಿ ಬಂದಿರುವುದರ ಮೇಲೆ ಮಾತನಾಡುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಬೇರೆ ತರಹ ತಿಳಿದುಕೊಳ್ಳಬೇಕಾದರೆ, ನಮಗೆ ಸಿ.ಐ.ಡಿ. ಡಿಪಾರ್ಟ್‌ಮೆಂಟ್ ಇದೆಯೇ, ಪೋಲೀಸ್ ಡಿಪಾರ್ಟ್‌ಮೆಂಟ್ ಇದೆಯೇ ?

D. DEVARAJ URS.—Now that the Hon. Member has brought to my notice I will look into it.

ಶ್ರೀ ಕಾಗೋಡು ತಿಮ್ಮಪ್ಪ.—ಪತ್ರಿಕೆಯಲ್ಲಿ ಬಂದಿರುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ನೋಡಿರುತ್ತಾರೆಂದು ನಮಗೆ ಇರತಕ್ಕ ಅಭಿಪ್ರಾಯ. ಅವರು ಒಂದುವೇಳೆ ನೋಡಿರದಿದ್ದರೂ ಈಗ ಗೊತ್ತಾಗಿದೆ. ಈಗಲಾದರೂ ಕೂಡ ತನಿಖೆಯನ್ನು ನಡೆಸಿ ಸದನಕ್ಕೆ ಒಂದು ವರದಿಯನ್ನು ಯಾವಾಗ ಕೊಡುತ್ತೀರಿ ? ಸುದ್ದಿ ಪ್ರಕಟವಾದ ಮೇಲೆ ಈ ಸದನದಲ್ಲಿ ಅದರ ಬಗ್ಗೆ ಒಂದು ವಿವರವಾದ ವರದಿಯನ್ನು ನೀಡಬೇಕೆಂದು ಅಪೇಕ್ಷೆ ಪಡುತ್ತೇವೆ. ಸಾಧ್ಯವಾದರೆ ಸಾಯಂಕಾಲದೊಳಗೆ ಕೊಡಬೇಕು. ಇದು ಬೆಂಗಳೂರಿನ ಹೊರಗಡೆ ನಡೆದದ್ದು ಅಲ್ಲ. ಬೆಂಗಳೂರಿನಲ್ಲೇ ನಡೆದ ವಿಷಯ.

ಶ್ರೀ ಕೋಣಂದೂರು ಲಿಂಗಪ್ಪ.—ಒಬ್ಬ ಸಚಿವರು ನಡೆಸಿದಂಥ ಅವ್ಯವಹಾರ. . . .

ಶ್ರೀ ಡಿ. ದೇವರಾಜ್ ಅರಸ್.—ನಿಮಗೆ ಹೇಗೆ ಗೊತ್ತು !

ಶ್ರೀ ಕೋಣಂದೂರು ಲಿಂಗಪ್ಪ.—ಪತ್ರಿಕೆಯಲ್ಲಿ ಬಂದಿದೆ.

Sri D. DEVARAJ URS.—Has the Hon. Member got proof ? If he has evidence let him prove.

ಶ್ರೀ ಕೋಣಂದೂರು ಲಿಂಗಪ್ಪ.—ಅದು ರಾಜ್ಯಾದ್ಯಂತ ದೊಡ್ಡ ಪತ್ರಿಕೆಯಲ್ಲಿ ಬಂದಿದೆ.

Sri D. DEVARAJ URS.—What all I say is that I will look into the matter in the course of today or tomorrow and when I come to know of it I will place it on the table of the House.

ಅದು ಏನು ಎಂದು ಹೇಳುವುದಕ್ಕೆ ಅವಕಾಶ ಮಾಡಿಕೊಡದೇ ಸುಮ್ಮನೇ ಊಹೆ ಮಾಡಿಕೊಂಡು ಒಬ್ಬ ಮಂತ್ರಿ ಹಾಗೆ ಮಾಡಿದರು ಎಂದು ಹೇಳುತ್ತಾ ಹೋದರೆ ಹೇಗೆ ?

ಶ್ರೀ ಕೋಣಂದೂರು ಲಿಂಗಪ್ಪ.—ಊಹೆ ಅಲ್ಲ, ಇರುವ ವಿಷಯ ಹೇಳುತ್ತಿದ್ದೇವೆ.

ಅಧ್ಯಕ್ಷರು.—ಪತ್ರಿಕೆಯಲ್ಲಿ ಬಂದಿರುವುದನ್ನು ನೀವು ನೋಡಿದ್ದೀರಿ, ನಾವು ನೋಡಿದ್ದೇವೆ. ಎಲ್ಲರೂ ನೋಡಿದ್ದಾರೆ, ಅದು ಏನು ಎಂದು ಕಂಡು ಹಿಡಿಯುವವರೆಗೆ ಅವಕಾಶ ಮಾಡಿ ಕೊಡಿ. ಆ ಮೇಲೆ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದಾರೆ, ಅದರಿಂದ ಸಮಾಧಾನ ಆಗದಿದ್ದರೆ ಹೇಗೆ ?

ಶ್ರೀ ಟಿ. ಎಂ. ಮಂಜುನಾಥ.—ಮಾನ್ಯ ಸಭಾ ನಾಯಕರು ಈಗ ತಾನೆ ನನಗೆ ಗೊತ್ತಿಲ್ಲ ಅಂತ ಹೇಳಿದರು. ಬಹುಶಃ ರಾಜ್ಯದಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿರತಕ್ಕವರು ಅವರು ಲಗುವಾಗಿ ತೆಗೆದುಕೊಳ್ಳತಕ್ಕದ್ದು ಅಲ್ಲ. ಸಭಾ ನಾಯಕರು ಊರಿನಲ್ಲಿ ಇಲ್ಲದೆ ಡೆಲ್ಲಿಗೆ ಅಥವಾ ಹೊರಗಡೆ ಹೋಗಿದ್ದರೆ ಸ್ವಾಭಾವಿಕವಾಗಿ ಗೊತ್ತಿಲ್ಲ ಎಂದು ಹೇಳಿದರೆ ಸಭೆ ಒಪ್ಪತಕ್ಕದ್ದು ಸರಿ. ಆದರೆ ತಾವು ಖುದ್ದು ರಾಜಧಾನಿಯಲ್ಲಿ ಇದ್ದುಕೊಂಡು ಗೊತ್ತಿಲ್ಲ ವೆಂದರೆ ಹೇಗೆ ? ನಿಮಗೆ ಎಷ್ಟರ ಮಟ್ಟಿಗೆ ಸಭೆಯ ಕಾರ್ಯಕಲಾಪಗಳ ಬಗ್ಗೆ ಆಸಕ್ತಿ ಇದೆಯೋ ಅಷ್ಟೇ ಆಸಕ್ತಿನಮಗೂ ಕೂಡ ಇದೆ.

ಶ್ರೀ ಡಿ. ದೇವರಾಜ್ ಅರಸ್.—ನೀವೆಲ್ಲಾ ಎಲ್ಲಿ ಹೋಗುತ್ತೀರಿ ಎಂದು ನೋಡುತ್ತಾ ಕೂತುಕೊಳ್ಳುವುದು ನಮ್ಮ ಕೆಲಸವೇ ? ಈಗ ಏನು ಆಗಿಬಿಟ್ಟಿದೆಯೋ ಗೊತ್ತಾಗಲಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ರಾಜ್ಯದಲ್ಲಿ ಮಂತ್ರಿಗಳು ಏನೇನು ಮಾಡುತ್ತಿದ್ದಾರೆ ಎಂದು ಸಾರ್ವಜನಿಕವಾಗಿ ನಡೆಯತಕ್ಕ ವಿಚಾರ ತಮ್ಮ ಗಮನಕ್ಕೆ ಬಂದೇ ಬರುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಅದು ಬರಬೇಕಾದ ಅಗತ್ಯವಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಈ ವಿಚಾರ ನಿಮ್ಮ ಗಮನಕ್ಕೆ ಬರಬೇಕಾದ ಅಗತ್ಯವಿಲ್ಲ ಎಂದು ಹೇಳಿಬಿಡಿ ಸಾಕು. ಮಂತ್ರಿಮಂಡಲದಲ್ಲಿ ಯಾರು ಏನು ಬೇಕಾದರೂ ಮಾಡಬಹುದೇ ?

ಶ್ರೀ ಡಿ. ದೇವರಾಜ್ ಅರಸ್.—ನೀವು ಏನುಬೇಕಾದರೂ ಮಾಡಿ, ಯಾರು ಏನು ಬೇಕಾದರೂ ಮಾಡಿದರೆ ಕಾನೂನಿನಂತೆ ಎಲ್ಲರೂ ಶಿಕ್ಷೆಗೆ ಒಳಗಾಗುತ್ತಾರೆ. ಯಾರು ಏನುಬೇಕಾದರೂ ಮಾಡುವುದಕ್ಕೆ ಆಗುವುದಿಲ್ಲ. ಎಷ್ಟು ಬೇಕೋ ಅಷ್ಟೆ ಮಾಡಬೇಕು. ಹೆಚ್ಚಿಗೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹೆಣ್ಣು ಮಕ್ಕಳಿಗೆ ಹೀಗೆ ಆಯಿತು ಎಂದು ನೋಡಿ ನಮ್ಮ ಮನಸ್ಸು ನೋಯುತ್ತದೆ.

ಅಧ್ಯಕ್ಷರು.—ಏನಾದರೂ ಹೊಲಸು ಕೆಲಸ ಆಗಬೇಕಾದರೆ ಒಂದು ಹೆಣ್ಣು ಇರಬೇಕು, ಒಂದು ಗಂಡು ಇರಬೇಕು. ಬರೀ ಗಂಡಸರಿಂದ ಅಥವಾ ಬರೀ ಹೆಂಗಸರಿಂದ ಆಗುವುದಿಲ್ಲ. ಒಂದೇ ಸಮನೇ ಇದನ್ನೇ ಹೇಳಿಕೊಂಡು ಹೋಗುವುದು ಸಭೆಗೆ ಘನತೆಗೌರವ ತರುವುದಿಲ್ಲ. ಅದನ್ನೇ ಹೇಳುತ್ತಾ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್.—ತಾವು ಹೆಂಗಸರ ಪರವಾಗಿ ಇದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷರೇ, ಇನ್ನೊಬ್ಬರ ಬಗ್ಗೆ ಮಾತನಾಡಿ ತೃಪ್ತಿಪಡುವ ಜನ ಇವರು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳು ಉನ್ನತ ಪೋಲೀಸ್ ಅಧಿಕಾರಿಗಳಿಗೆ ಫೋನ್ ಮುಖಾಂತರ ತಿಳಿಸಿದರು, ಉನ್ನತ ಅಧಿಕಾರಿಗಳು ಮಂತ್ರಿಗಳ ಮನೆಗೆ ಬಂದು ತನಿಖೆ ನಡೆಸಿದಾಗ ಹೊರಗಡೆ ಹಾಕುವುದಕ್ಕೆ ಕಾನೂನು ರೀತಿ ಆಗುವುದಿಲ್ಲ ಎಂದು ಹೇಳಿ ಹೋದರು. ತದನಂತರ ಆಪ್ತಕಾರ್ಯದರ್ಶಿ. . . .

ಶ್ರೀ ಡಿ. ದೇವರಾಜ್ ಅರಸ್.—ತಾವು ಹೋಗಿ ಕೇಳಿಕೊಂಡು ಬಂದಿರಾ . . ? ನೀವು ಇದನ್ನು ನೋಡುತ್ತಾ ಇದ್ದೀರಾ . . ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ಇಷ್ಟೊಂದು ಕೋಪ ಮಾಡಿಕೊಳ್ಳಬೇಡಿ.

ಶ್ರೀ ಡಿ. ದೇವರಾಜ್ ಅರಸ್.—ಕೋಪವಿಲ್ಲ, ತಾಪವಿಲ್ಲ, ಆಮೇಲೆ ವಿಚಾರಿಸೋಣ.

ಅಧ್ಯಕ್ಷರು.—ಮಾತನಾಡಿ ಚಪಲ ತೀರಿಸಿಕೊಳ್ಳುತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಹೇಳುವುದನ್ನು ಸಾವಧಾನದಲ್ಲಿ ಕೇಳಿ.

ಅಧ್ಯಕ್ಷರು.—ಪೇಪರಿನಲ್ಲಿ ಬಂದಿರುವುದಕ್ಕಿಂತ ಜಾಸ್ತಿ ಗೊತ್ತಿದೆಯೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹೌದು, ಏನು ವಿಷಯ ಎಂದರೆ ರಾಜ್ಯ ಸಚಿವರು ಉನ್ನತಾಧಿಕಾರಿಗಳಿಗೆ ಹೆಂಗಸರೊಬ್ಬರನ್ನು ಹೊರಗಡೆ ಕಳುಹಿಸಬೇಕಾಗಿದೆ ಎಂದು ಫೋನ್ ಮಾಡಿದರು. ಮನೆಗೆ ಹೋಗಿ ವಿವರಗಳನ್ನು ಅರಿತ ಮೇಲೆ ಆ ಮಗುವನ್ನು ಬಲಾತ್ಕಾರವಾಗಿ ಹೊರಗಡೆ ಹಾಕುವುದಕ್ಕೆ ಆಗುವುದಿಲ್ಲವೆಂದು ಹೇಳಿ ಹೊರಟು ಹೋದರು. ತದನಂತರ ಮಂತ್ರಿಗಳು ಆಪ್ತರಲ್ಲಿ ಆಲೋಚನೆ ಮಾಡಿ ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿದರು. ಡೆಪ್ ಕಾನ್ಸ್‌ಟೆಬಲ್ ತತ್‌ಕ್ಷಣ ಟ್ಯಾಕ್ಸಿ ಮಾಡಿಕೊಂಡು ಬಂದು ಬಲಾತ್ಕಾರವಾಗಿ ಆಕೆಯನ್ನು ಮನೆಯಿಂದ ಕರೆದುಕೊಂಡು ಹೋಗಿದ್ದಾರೆ.

ಅಧ್ಯಕ್ಷರು.—ಅದು ಎಲ್ಲಾ ಯಾರು ಹೇಳಿದರು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನನಗೆ ಅನೇಕ ಕಡೆಯಿಂದ ಸಮಾಚಾರ ಬರುತ್ತದೆ. ಬೊಂಬಾಯಿಗೆ ನಮ್ಮ ಮಂತ್ರಿಗಳಲ್ಲಿ ಒಬ್ಬರು ಹೋಗಿ ಒಂದು ಕಡೆ ಇಳಿದುಕೊಂಡು ಅವ್ಯವಹಾರ ಮಾಡಿದ ಬಗ್ಗೆ ನಾನು ಹಿಂದೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ದುರ್ದೈವವಶಾತ್ ಮುಖ್ಯಮಂತ್ರಿಗಳು ಅದರ ಬಗ್ಗೆ ಹೇಳಿಕೆಯನ್ನು ಕೊಡಲಿಲ್ಲ. ತನಿಖೆಯನ್ನು ಮಾಡಲಿಲ್ಲ. ಮಹಾರಾಷ್ಟ್ರ ಸರ್ಕಾರದಿಂದ ನಿಮ್ಮ ಸರ್ಕಾರಕ್ಕೆ ಬಂದಂಥ ಅಂಶದ ಬಗ್ಗೆ ರಾಜ್ಯ ಸಚಿವರ ಮೇಲೆ ಆಗಲೇ ಕಟ್ಟು ನಿಟ್ಟಾದ ಕ್ರಮವನ್ನು ತೆಗೆದುಕೊಂಡಿದ್ದರೆ ಪರಿಸ್ಥಿತಿ ಇಷ್ಟು ಉಲ್ಬಣಕ್ಕೆ ಬರುತ್ತಿರಲಿಲ್ಲ. ಕಾರ್ಯದ ಒತ್ತಡದಿಂದ ಉದಾಸೀನ ಮಾಡಿದ್ದೀರಿ. ದಯಮಾಡಿ ಕೋಪಿತರಾಗಬೇಡಿ. ತತ್‌ಕ್ಷಣ ತನಿಖೆಯನ್ನು ನಡೆಸಿ ಸಭೆಗೆ ಬಂದು ಹೇಳಿಕೆ ಕೊಡಿ ನಾವು ಮಾತನಾಡಿ ಚಪಲ ತೀರಿಸಿಕೊಳ್ಳುವ ಜನರಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷರೇ, ನನ್ನ ಗಮನಕ್ಕೆ ವಿಷಯ ತಂದಿದ್ದಾರೆ. ಪೇಪರಿನಲ್ಲಿ ಬಂದಿದೆ. ಅದು ಏನು ಎಂದು ನೋಡುವುದಕ್ಕೆ ಅವಕಾಶ ಮಾಡಿಕೊಡಲಿ. ಏನಾದರೂ ವಿಚಾರಗಳು ಗೊತ್ತಿದ್ದರೆ ನೇರವಾಗಿ ನನಗೆ ತಿಳಿಸಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಲಾಯಿದ ಹೇಳುತ್ತೇನೆ, ಮುಖ್ಯಮಂತ್ರಿಗಳು ಬಾಳೆಹಣ್ಣು, ಹಾಲು ಕುಡಿದುಕೊಂಡು ಬಂದರೆ ಚೆನ್ನಾಗಿರುತ್ತಾರೆ, ಇಲ್ಲದಿದ್ದರೆ ಕೋಪದಿಂದ ಇರುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ತಾವು ಯಾವುತ್ತು ಹೇಳುವುದಕ್ಕೆ ಬಂದಿಲ್ಲವಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಭೆ ಏಳುವುದರೊಳಗಾಗಿ ತಾವು ಹೇಳಬೇಕು.

Sri D. DEVARAJ URS.—I must look into the matter.

ಶ್ರೀ ಕಾಗೋಡು ತಿಮ್ಮಪ್ಪ.—ಫ್ರೈಮ ಫೇಸಿ ಫ್ಯಾಕ್ಟುಯಲ್ ಆಗಿ ಈ ಘಟನೆ ನಡೆದದ್ದು ಹೌದೇ ಅಲ್ಲವೇ ಹೇಳಿ.

ಶ್ರೀ ಡಿ. ದೇವರಾಜ್ ಅರಸ್.—ನೀವು ಎಷ್ಟು ಆ ಬಗ್ಗೆ ಕಾತುರತೆ ವ್ಯಕ್ತಪಡಿಸುತ್ತೀರೋ ಅಷ್ಟೇ ಕಾತುರತೆ ನಮಗೂ ಇದೆ. ಯಾರಾದರೂ ಒಬ್ಬ ಸಚಿವರ ಹೆಸರು ಬಂದರೆ ಅವರ ಮೇಲೆ ದುಷ್ಪರಿಣಾಮವುಂಟಾಗು ವಂಥ ಸುದ್ದಿ ಸಮಾಚಾರ ಬಂದರೆ, ನಾವು ಪ್ರಾಯಶಃ ತಪಾಸಣೆ ಮಾಡಿ ಅದು ಸುಳ್ಳೋ ನಿಜವೋ ಎಂದು ತಿಳಿದುಕೊಂಡು ಮುಂದೆ ಏನು ಆಯಿತು ಎನ್ನುವುದನ್ನು ನೋಡಿ ಹೇಳಬೇಕಾಗುತ್ತದೆ. ನಮಗೂ ಕುತೂಹಲ ಇಲ್ಲವೇ ? ನೀವು ಸಾಯಂಕಾಲದೊಳಗೆ ಹೇಳಿ ಅಂದರೆ ಅರ್ಥವೇನು ?

ನಾಳೆ ಸಭೆಯ ಮುಂದೆ ಇಡುತ್ತೇನೆ. ಈವೊತ್ತೇ ಸಭೆಯ ಮುಂದೆ ಇಡಿ ಅಂದರೆ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ನಿರಪರಾಧಿಯ ಮೇಲೆ ಆಪಾದನೆ ಬರಬಾರದು ಎನ್ನುವುದನ್ನು ನಾನು ಒಪ್ಪತಕ್ಕವನು. ಆದುದರಿಂದ ಒಬ್ಬ ಮಂತ್ರಿಯ ಮೇಲೆ ಆಪಾದನೆ ಬಂದಿದೆ. ಅದರ ಸತ್ಯಾ ಸತ್ಯತೆಗಳನ್ನು ಪರಿಶೀಲಿಸಿ ಬೇಗ ಉತ್ತರ ಹೇಳಿದರೆ, ಅನಾವಶ್ಯಕವಾಗಿ ಜನರ ಮನಸ್ಸಿನಲ್ಲಿರುವ ಗೊಂದಲವನ್ನು ಪರಿಹರಿಸಬ ಹುದು. ಜನರು ಸುಳ್ಳುಹೇಳಿದ್ದಾರೆ ಎಂದು ತಿಳಿದುಕೊಳ್ಳುತ್ತಾರೆ. ನಿಮ್ಮ ಹೇಳಿಕೆ ಬರುವವರೆಗೆ ಜನ ಕಾಯುತ್ತಾರೆಯೇ ?

ಶ್ರೀ ಡಿ. ದೇವರಾಜ್ ಅರಸ್.—ನಿಜಾಂಶ ಏನಿದೆ ಎನ್ನುವುದನ್ನು ತಿಳಿದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್.—ಒಂದು ಪ್ರಶ್ನೆ, ಅವರು ಯಾರು ? ಅವರ ವೇರಬೌಟ್ಸ್ ಏನು ಗೊತ್ತಿಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ಸುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ. ಅದು ಸಂಯುಕ್ತ ಕರ್ನಾಟಕ ಎಂಬ ದೊಡ್ಡ ದಿನಪತ್ರಿಕೆಯಲ್ಲಿ ಏತಕ್ಕೆ ಬರಬೇಕು ? ಐ.ಜಿ.ಪಿ. ಹೋಗಿದ್ದರು ಎಂದು ಇದೆ. ಮಾನ್ಯ ಮುಖ್ಯ ಮಂತ್ರಿಗಳು ಗೃಹಸಚಿವರಾಗಿದ್ದಾರೆ. ಅವರಿಗೆ ಗೊತ್ತಿರಬೇಕು.

ಅಧ್ಯಕ್ಷರು.—ತಾವು ಕನ್ನಡದಲ್ಲಿ ಮಾತನಾಡಿದಿರಿ, ನನಗೆ ಅರ್ಥವಾಯಿತು. ಏಕೆ ಪುನರುಚ್ಚಾರ ಮಾಡುತ್ತಿದ್ದೀರಿ ? ವಿಚಾರಮಾಡಿ, ತನಿಖೆಮಾಡಿ ಹೇಳುತ್ತೇನೆ ಎಂದು ಹೇಳಿದ್ದಾರೆ. ಅಲ್ಲಿಗೆ ಬಿಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರು ಏತಕ್ಕೆ ಇಷ್ಟು ಒತ್ತಾಯ ಮಾಡುತ್ತಾರೋ ಅರ್ಥವಾಗು ವುದಿಲ್ಲ.

ಅಧ್ಯಕ್ಷರು.—ಅದನ್ನು ಕಿವಿಯಲ್ಲಿ ಕೇಳಲಿಕ್ಕೆ ಸಹ್ಯವಾಗಿಲ್ಲ. ಅದಕ್ಕೋಸ್ಕರ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಅಸಹ್ಯ ಎಂದರೆ, ಯಾರ ಮೇಲೆ ಆರೋಪಣೆ ಬಂದಿರುವುದು ? ನಮ್ಮ ಮೇಲೆ ಆರೋಪಣೆ ಬಂದಿದೆಯೇ ? ಸರ್ಕಾರದ ಸಂಪ್ರುಟದ ಮೇಲೆ ಆರೋಪಣೆ ಬಂದಿದೆ. ಅದಕ್ಕೇ ಹೇಳುತ್ತಾ ಇರುವುದು.

ಅಧ್ಯಕ್ಷರು.—ಅವರು ತನಿಖೆಮಾಡಿ ಹೇಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ವಿಷಯವನ್ನು ಚರ್ಚೆಮಾಡಬೇಕು ಎನ್ನುವ ಹಂಬಲ ನನಗಿಲ್ಲ. ಆದರೆ ಆ ವಿಷಯವನು ಪರಿಶೀಲನೆಮಾಡಿ ವರದಿ ನಾಳೆ ಕೊಡಿ. ನಾಳೆದು ಕೊಡಿ ಅಥವಾ 3—4 ದಿವಸಗಳು ಆದಮೇಲೆ ಕೊಡಿ. ಇಷ್ಟು ಮಾತ್ರ ಹೇಳುತ್ತೇನೆ. ವರದಿ ಸತ್ಯವಾದರೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆಮಾಡತಕ್ಕ ದೃಢ ಸಂಕಲ್ಪ ಮಾಡಬೇಕು. ನೀವು ಎಷ್ಟೇ ಆಡಳಿತದಲ್ಲಿ ಕೆಲವು ಸತ್ಸಂಪ್ರದಾಯಗಳನ್ನು ಹಾಕಬೇಕು ಎಂದು ಮನಸ್ಸು ಮಾಡಿದರೂ ಇಂತಹ ಕೆಲವು ಘಟನೆಗಳು ಬಹುಶಃ ನಿಮ್ಮ ಆಡಳಿತಕ್ಕೆ ಬಹಳ ಕಂಟಕಪ್ರಾಯವಾಗು ತ್ತದೆ. ಪತ್ರಿಕೆಯಲ್ಲಿ ಬರುವ ವರದಿ ಸತ್ಯ ಎಂದು ನಂಬಬೇಕು ಎಂದು ಹೇಳುತ್ತಾ ಇಲ್ಲ. ಇಂತಹ ಹಲವಾರು ಘಟನೆಗಳು ಪತ್ರಿಕೆಯಲ್ಲಿ ಬಂದಿವೆ. ಹಿಂದೆ ಇದೇ ತರಹ ವಿಷಯದ ಬಗ್ಗೆ ವಾದವಿವಾದ ನಡೆಯಿತು, ಈರೀತಿ ಆಗುವುದನ್ನು ಕೊನೆಗಾಣಿಸಬೇಕು. ಈ ತರಹ ಘಟನೆಗಳಿಗೆ ಅವಕಾಶ ಕೊಡತಕ್ಕಂಥ ಮಂತ್ರಿಗಳು ನಿಮ್ಮ

(ಶ್ರೀ ಪೆಚ್. ಡಿ. ದೇವೇಗೌಡ)

ಸಂಪುಟದಲ್ಲಿ ಇದ್ದಾರೆ. ಎಷ್ಟು ಎಡರು ತೊಡರುಗಳು ಇದ್ದರೂ ಅವರನ್ನು ಕಿತ್ತು ಹೊರಗೆಹಾಕಬೇಕು. ನಿರ್ದಾಕ್ಷಿಣ್ಯವಾಗಿ ಫಿಯರ್ ಇಲ್ಲದೆ ಇದರ ಬಗ್ಗೆ ಮುಖ್ಯ ಮಂತ್ರಿಗಳು ತೀರ್ಪ್ ತೆಗೆದುಕೊಳ್ಳಬೇಕು. ಪೂರ್ಣ ವಿವರವನ್ನು ಈ ಸಭೆಗೆ ಕೊಡುವುದಕ್ಕೆ ಮುಖ್ಯ ಮಂತ್ರಿಗಳು ಮನಸ್ಸು ಮಾಡಬೇಕು ಎಂದು ಇಷ್ಟುಮಾತ ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷರೇ ಆ ವಿಚಾರ ಸಭೆಯ ಮುಂದೆ ಬಂದಿದೆ. ನಾನು ಅದನು ನಿಜ ಎಂದೂ ಹೇಳಲಿಲ್ಲ, ಅದನ್ನು ಸುಳ್ಳು ಎಂದೂ ಹೇಳಲಿಲ್ಲ.

I have neither denied nor accepted. Now that it is brought to the notice of the Government, I said that I will thoroughly go into the matter. In case there is truth involved and somebody is involved, he has to face the consequences. I am not interested in shielding anybody, whether one is in the cabinet or outside. Any person who does not conduct himself befitting his position, does not deserve to be there, whoever he is. So, I would suggest to the hon. Leader of the Opposition that he need not have any apprehension or doubt with regard to the statement I make now or made previously, namely, that I do not hesitate to take action against any person if his conduct is found to be not in consonance with either public interest or certain moral standards. But I think the Leader of the Opposition and the Members of the House will agree that one cannot take action against anything not proved or if it is based merely on hearsay. There is the famous Kannada saying ಯಾವುದೇ ವಿಚಾರ ಪ್ರತ್ಯಕ್ಷ ಸಿದರೂ ಪ್ರಮಾಣಿಸಿ ನೋಡು ಎನ್ನುವ ಮಾತಿದೆ. Against men who are in public affairs, it is likely that anything is easily said. In fact let me tell the House through the Chair that things are said not only against ministers but said against the Members of the Assembly irrespective of this party or that party. Such allegations are freely made against so many people. But I do not say that I shall take shelter under the cover of saying that the allegations are generally made and so this is also stated in a light hearted manner. I am not saying that. Now that it has appeared. I will look into it. What I want to stress is, even if anybodyhasdone anything, if you want to take action, we have to satisfy ourselves completely with regard to the veracity of the allegation made. I think you will agree that I require a little time to look into it. Certainly the idea you have mentioned that we should not allow such things to happen or if any such things happens such person should not be allowed to continue in position, is correct and I at once agree. I only wish to point out that we will have to thoroughly examine the case and if there is any truth, we will take action and the concerned person has to take the consequence. I hope till then let us not spend any more time on this issue.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಅಧ್ಯಕ್ಷರು ಅಪ್ಪಣೆ ಕೊಟ್ಟರೆ, ಒಂದು ಮನವಿ ಮಾಡುತ್ತೇನೆ. ಇದುವರೆಗೂ ನಾನು ಮಾತಾಡಿಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ ಮೇಲೆ ಜನಗಳಿಗೆ ಇಡೀ ಮಂತ್ರಿಮಂಡಲದ ಮೇಲೆ ಒಂದು ವಿಧವಾದ ಅಭಿಪ್ರಾಯ ಬರುತ್ತದೆ. ಆದಷ್ಟು ಶೀಘ್ರವಾಗಿ ವಿಚಾರಣೆ ನಡೆಸಿ, ಈ ಸದನ ಮುಗಿಯುವುದರೊಳಗೆ ಏನು ನಡೆಯಿತು ಎಂದು ತಿಳಿಸುವುದರ ಜೊತೆಗೆ, ಒಂದು ಹೇಳಿ ಪತ್ರಿಕೆಯಲ್ಲಿ ಬಂದಿರುವುದು ಸುಳ್ಳಾಗಿದ್ದರೆ.

Sri D. DEVARAJ URS.—You are the only people to guard our interest.

ಶ್ರೀ ಕೆ. ಎಂ. ನಾಗಣ್ಣ.—ಪತ್ರಿಕೆಯಲ್ಲಿ ಬಂದಿರುವುದು ಸುಳ್ಳಾಗಿದ್ದರೆ, ಆ ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಬೇಕು.

Sri D. DEVARAJ URS.—I am not saying there is no truth.

Sri K. M. NAGANNA.—Assuming the report is false, you must take action against the paper.

Sri D. DEVARAJ URS.—I am not prepared to say that I will taka action unless I know what it is.

(ii) Re *Deposits of the people by the Indian axpress a speaker concern.*

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೊಂದು ಗಹನವಾದ ವಿಷಯವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಮೈಸೂರು ರಾಜ್ಯದ ಅನೇಕ ಮಧ್ಯಮ ವರ್ಗದ ಜನರು, ಸರ್ಕಾರಿ ನೌಕರರು ಮತ್ತು ಕೆಲವು ಜನ ಶ್ರೀಮಂತರು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಮಾಲೀಕರಾದ ಶ್ರೀ ಗೊಯಂಕಾರ್‌ರವರ ಕಂಪೆನಿಯಲ್ಲಿ ಬೇಕಾದಷ್ಟು ಹಣವನ್ನು ಡಿಪಾಜಿಟ್ ಮಾಡಿದ್ದಾರೆ ಎಂದು ತಿಳಿದು ಬಂದಿದೆ.

2-30 ಪಿ.ಯಂ.

ಏತಕ್ಕೆಂದರೆ ಇದರಲ್ಲಿ ಲಕ್ಷಾಂತರ ರೂಪಾಯಿ ಹಣವನ್ನು ಫಿಕ್ಸೆಡ್ ಡಿಪಾಜಿಟ್‌ನಲ್ಲಿ ಇಟ್ಟಿದ್ದಾರೆ. ಈ ಬಗ್ಗೆ 1—2 ತಿಂಗಳಿನಿಂದಲೂ ಕೂಡ ಗೊಂದಲ ಎದ್ದಿದೆ.

ಅಧ್ಯಕ್ಷರು.—ಇಲ್ಲಿ ಫೈನಾನ್ಸ್ ಮಿನಿಸ್ಟರ್ ಇಲ್ಲ, ಯಾರು ಉತ್ತರ ಹೇಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮುಖ್ಯಮಂತ್ರಿಗಳು ಇರುವುದರಿಂದ ಅವರು ಹೇಳಿದರೂ ಪರವಾಯಿಲ್ಲಾ. ಏತಕ್ಕೆ ಈ ವಿಷಯ ಹೇಳುತ್ತಿದ್ದೇನೆ ಎಂದರೆ ಇದರಲ್ಲಿ ಮಧ್ಯಮ ವರ್ಗದವರು, ಅನೇಕ ನೌಕರರೂ ಎಲ್ಲರೂ ಸೇರಿ ಲಕ್ಷಾಂತರ ರೂಪಾಯಿ ಹಣವನ್ನು ಇಟ್ಟಿದ್ದಾರೆ. ಗೋಯಂಕ ಎಂಪೈರ್ ಈಸ್ ಕ್ರಂಬ್ಲಿಂಗ್ ಅನ್ನುವ ವಿಷಯ ತಿಳಿದುಬಂದಿದೆ. ಈ ಬಗ್ಗೆ ಎಲ್ಲಾ ವಿಷಯಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟ ಪಡುವುದಿಲ್ಲ. ಇದರಲ್ಲಿ ಸುಮಾರು 60 ಲಕ್ಷ 4 ಸಾವಿರ 813 ರೂಪಾಯಿ ಲಾಸ್ ಆಗಿದೆ ಆದರಿಂದ ವಹಿವಾಟ್ ನಡೆಸುವುದಕ್ಕೆ ಕಷ್ಟವಾಗಿದೆ ಎಂದು ತಿಳಿದು ಬಂದಿದೆ. ಮತ್ತು ಅವರು ಡಿಪಾಸಿಟ್ ಹಿಂತಿರುಗಿ ಕೊಡುವುದಕ್ಕೆ ಹಿಂಜರಿಯುತ್ತಿದ್ದಾರೆ ಎಂದು ತಿಳಿದು ಬಂದಿದೆ. ಈ ವಿಚಾರ ಬ್ಲಿಟ್ಸ್ ಪೇಪರ್ ಮತ್ತು ವರ್ಕಿಂಗ್ ಜರ್ನಲಿಸ್ಟ್ ಪೇಪರ್‌ನಲ್ಲೂ ಬಂದಿದೆ.

ಅಧ್ಯಕ್ಷರು.—ಇದರಲ್ಲಿ ಸರ್ಕಾರದ ಜವಾಬ್ದಾರಿ ಏನು ಇದೆ ? ಜನಗಳನ್ನು ದುಡ್ಡು ಕೊಡಿ ಎಂದು ಸರ್ಕಾರ ಹೇಳಲಿಲ್ಲವಲ್ಲಾ !

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಮೈಸೂರಿನಲ್ಲಿರುವ ಸಾಮಾನ್ಯ ಜನರು ಡಿಪಾಸಿಟ್ ಹಾಕಿದ್ದಾರೆ. ಅಲ್ಲದೆ ಇವರ ವಹಿವಾಟವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅಂಥಾದ್ದರಲ್ಲಿ ಇವರು ಈರೀತಿ ಅನ್ಯಾಯ ಮಾಡಿದರೆ, ಅಕೃತ್ಯಗಳನ್ನು ಮಾಡಿದರೆ ಸರ್ಕಾರದವರು ಸೂಕ್ತಕ್ರಮ ತೆಗೆದುಕೊಂಡು ಅನ್ಯಾಯ ಆಗದ ಹಾಗೆ ನೋಡಿಕೊಳ್ಳಬೇಕಲ್ಲವೇ ? ನನಗೆ ಮೈಸೂರು ರಾಜ್ಯದ ಒಬ್ಬ ಉನ್ನತ ಅಧಿಕಾರಿಯೇ ಹೇಳಿದ್ದಾರೆ. ಅವರೂ ಕೂಡ ಡಿಪಾಸಿಟ್ ಇಟ್ಟಿದ್ದಾರೆ. ಅದು ಏನಾಗುತ್ತದೋ ಗೊತ್ತಿಲ್ಲ. ಈ ತರಹ ಪರಿಸ್ಥಿತಿ ಬಂದಿದೆ. ಇದನ್ನು ಕೇಂದ್ರ ಸರ್ಕಾರಕ್ಕೆ ಒಂದಕ್ಕೇ ಬಿಡುವುದು ಸರಿಯಲ್ಲ. ಇದರಲ್ಲಿ ಏಕಸಾಮ್ಯ ತಪ್ಪಿದರೆ ನಾವೇನೂ ಕಣ್ಣೀರಿಡುವುದಿಲ್ಲ. ಆದುದರಿಂದ ಹಣಕಾಸಿನ ಮಂತ್ರಿಗಳು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವ ಹಾಗೆ ಶಿಫಾರಸ್ಸು ಮಾಡಬಹುದಲ್ಲಾ. ಇದನ್ನು ಕ್ರಂಬಲ್ ಆಗದೇ ಇದ್ದ ಹಾಗೆ ನೋಡಿಕೊಳ್ಳಬೇಕಲ್ಲವೇ ? ಇವರಿಂದ ಆಗತಕ್ಕಂಥ ಕೆಟ್ಟ ಪರಿಣಾಮವನ್ನು ತಪ್ಪಿಸಿ ಮೈಸೂರು ಜನತೆಗೆ ಅನುಕೂಲ ಮಾಡಿಕೊಡಬೇಕಾದ್ದು ಈ ಸರ್ಕಾರದ ಜವಾಬ್ದಾರಿ ಇದೆ. ಈ ದೃಷ್ಟಿಯಿಂದ ಇದರ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ವಿವರಗಳು ಬ್ಲಿಟ್ಸ್ ಪೇಪರ್‌ನಲ್ಲೂ ಮತ್ತು ವರ್ಕಿಂಗ್ ಜರ್ನಲಿಸ್ಟ್ ಪೇಪರ್‌ನಲ್ಲೂ ಬಂದಿದೆ. ಆ ಪೇಪರ್‌ನ್ನು ಕೊಡುತ್ತೇನೆ, ಆದರ ಆಧಾರದಮೇಲೆ ತಾವು ಒಂದು ಸ್ಟೇಟ್‌ಮೆಂಟ್ ಮಾಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.